**ರಮ್ಯಾ:** ನಾನು ಒಬ್ಬ ಹುಡುಗನನ್ನು ಪ್ರೀತಿಸುತ್ತಿರುವುದು ನಮ್ಮ ತಾಯಿಗೆ ಗೊತ್ತಾದರೆ ನನ್ನ ಕೈ ಮೇಲೆ ಬರೆ ಹಾಕಿಬಿಡುತ್ತಾರೆ.
**ಗೆಳೆಯ:** ನಿನ್ನ ಅಮ್ಮ ಅಷ್ಟೊಂದು ಸ್ಟ್ರಿಕ್ಟಾ?
**ರಮ್ಯಾ:** ಹೌದು! ಬೇಕಾದರೆ ಈ ನನ್ನ ಕೈ ನೋಡು. ಈಗಾಗಲೇ ಐದಾರು ಬರೆ ಹಾಕಿದಾರೆ.








**ಗೆಳೆಯ:** ಪೊಲೀಸರು ವಿಚಾರಣೆ ಹೇಗೆ ಮಾಡುತ್ತಾರೆ?
**ಗುಂಡ:** ಅಪರಾಧಿಗಳ ಮೂಗು ಹಿಡಿಯುತ್ತಾರೆ.
**ಗೆಳೆಯ:** ಅರೆ ಹೌದಾ? ಯಾಕೆ?
**ಗುಂಡ:** ಆಗ ಅಪರಾಧಿ ಬಾಯಿ ಬಿಡುತ್ತಾನೆ.

**ರೋಗಿ:** ನಿಂತುಕೊಂಡಿದ್ದರೆ ಕುಳಿತುಕೊಂಡಿರುವ ಹಾಗೆ, ಕುಳಿತುಕೊಂಡರೆ ಮಲಗಿರುವ ಹಾಗೆ ಭಾಸವಾಗುತ್ತದೆ. ಏನು ಮಾಡಲಿ?
**ವೈದ್ಯ:** ಮಲಗಿಕೊಂಡಿದ್ದರೆ ಹೊತ್ತುಕೊಂಡು ಹೋಗುವ ಹಾಗೆ ಭಾಸವಾಗುವುದಿಲ್ಲವೇ?

**ಸಂದರ್ಶಕ:** ನಿಮ್ಮ ಈ 105 ವರ್ಷ ದೀರ್ಘಾಯಸ್ಸಿನ ಗುಟ್ಟೇನು?
**ಗುಂಡ:** ಬಹುಶಃ 105 ವರ್ಷಗಳ ಹಿಂದೆ ಹುಟ್ಟಿದ್ದು ಇದಕ್ಕೆ ಕಾರಣವಿರಬಹುದು.

**ಗೆಳೆಯ:** ನಿಮ್ಮ ಮಗು ಒಂದು ರೂಪಾಯಿ ನುಂಗಿತ್ತಲ್ವಾ, ಡಾಕ್ಟರ್ ಏನಂದ್ರು?
**ಗುಂಡ:** ಅವರು ಅದನ್ನು ತೆಗೆದು ಸಾವಿರ ರೂಪಾಯಿ ನುಂಗಿದರು.

**ಹುಡುಗಿ:** ಆವಾಗಿನಿಂದ ನಿಮಗೆ ಕಾಯ್ತಿದ್ದೆ.
**ಹುಡುಗ:** ಹೌದಾ, ಯಾಕೆ?
**ಹುಡುಗಿ:** ರಾಖಿ ಕಟ್ಟುವುದಕ್ಕೆ.




**ಟೀಚರ್:** ಗುಂಡ ಏಕವಚನಕ್ಕೂ ಬಹುವಚನಕ್ಕೂ ಇರುವ ವ್ಯತ್ಯಾಸವೇನು?
**ಗುಂಡ:** ನಮ್ಮಪ್ಪ ಆಡೋದು ಒಂದೇ ಮಾತು. ಅದು ಏಕವಚನ. ನಮ್ಮಮ್ಮ ಆಡೋದು ನೂರು ಮಾತು ಅದು ಬಹುವಚನ. ಇದೇ ವ್ಯತ್ಯಾಸ.

**ವೈದ್ಯ:** ಹಲ್ಲಿ ಹೊಟ್ಟೆಯೊಳಗೆ ಹೋಗೋ ತನಕ ನೀವೇನು ಮಾಡ್ತಿದ್ರಿ?
**ಗುಂಡ:** ಹಲ್ಲಿಗೂ ಮೊದಲು ಒಂದು ನೊಣ ಹೋಗಿತ್ತು ಡಾಕ್ಟ್ರೆ. ಅದನ್ನು ಹಿಡಿಯಲು ಹಲ್ಲಿ ಹೋಗ್ತಾ ಇದೆ ಅಂತ ಅಂದುಕೊಂಡು ಸುಮ್ಮನೆ ಕುಳಿತುಕೊಂಡಿದ್ದೆ.




**ವೈದ್ಯ:** ಏನ್ರೀ ಇದೂ ನಿಮ್ಮ ಲಿವರ್ ಇಷ್ಟು ದೊಡ್ಡದಾಗಿ ಬಿಟ್ಟಿದೆ?
**ರೋಗಿ:** (ಕಣ್ಣರಳಿಸುತ್ತ) ಅಂದರೆ, ಇನ್ನು ಮುಂದೆ ನಾನು ಇನ್ನೂ ಹೆಚ್ಚಾಗಿ ವಿಸ್ಕಿ ಹಿಡಿಸಬಹುದಲ್ಲವಾ ಡಾಕ್ಟರ್?

**ಗುಂಡ:** ಏನ್ ಸಾರ್ ಈ ಪುಸ್ತಕದಲ್ಲಿರುವ ಕಥೆಗಳು ಒಂದು ಚೂರೂ ಚೆನ್ನಾಗಿಲ್ಲ. ಮುನ್ನುಡಿಯಲ್ಲಿ ಬರೀ ಜನರ ಹೆಸರೇ ತುಂಬಿಹೋಗಿದೆ?
**ಲೈಬ್ರರಿಯನ್:** ಓ ಬಾರಯ್ಯಾ ಬಾ! ಲೈಬ್ರರಿ ರಿಜಿಸ್ಟರ್ ಪುಸ್ತಕ ತೆಗೆದುಕೊಂಡು ಹೋದ ಕಮಂಗಿ ನೀನೇನಾ?

**ಗಂಡ:** ಸಾಂಬಾರ್‌ನಲ್ಲಿ ಎರಡು ರೂಪಾಯಿ ಕಾಯಿನ್ ಹಾಕಿದಿಯಲ್ವೆ?
**ಹೆಂಡತಿ:** ನೀವೇ ಹೇಳಿದಿರಲ್ಲಾ ಅಡುಗೆಯಲ್ಲಿ ಚೇಂಜ್ ಇರಲಿ ಅಂತ. ಅದಕ್ಕೆ ಹಾಕ್ದೆ.

ಸಂಗ್ರಹ: ಎಂ.ಕೆ. ಮಂಜುನಾಥ್, ಬೆಂಗಳೂರು